# <u>ಕಾಗದ ರಹಿತ ಪ್ರಮಾಣ ಪತ್ರಗಳ ಸೇವೆ</u>

ರಾಜ್ಯದ ಸಾರ್ವಜನಿಕರಿಗೆ ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ವಿವಿಧ ಸೇವೆಯ ಪ್ರಮಾಣ ಪತ್ರಗಳನ್ನು ಗಣಕೀಕೃತವಾಗಿ ಮುದ್ರಿಸಿ ವಿತರಿಸಲಾಗುತ್ತಿದೆ. ಸಾರ್ವಜನಿಕರು ಸದರಿ ಪ್ರಮಾಣ ಪತ್ರಗಳನ್ನು ಇತರ ಇಲಾಖೆಗಳಾದ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಇತರೆ ಇಲಾಖೆಗಳು ನೀಡುವ ಸೌಲಭ್ಯಗಳನ್ನು ಪಡೆಯಲು ಸಲ್ಲಿಸುವ ಪ್ರತಿ ಅರ್ಜಿಗಳಲ್ಲಿಯೂ ದಾಖಲೆಯಾಗಿ ಲಗತ್ತಿಸಬೇಕಾಗಿರುತ್ತದೆ. ಪ್ರತಿ ಅರ್ಜಿಗಳಲ್ಲಿಯೂ ಈ ರೀತಿ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಲಗತ್ತಿಸಬೇಕಾಗಿರುವ ತೊಂದರೆಯನ್ನು ಸಾರ್ವಜನಿಕರಿಗೆ ತಪ್ಪಿಸುವ ಹಾಗೂ ನಕಲಿ ಪ್ರಮಾಣ ಪತ್ರಗಳ ಉಪಯೋಗವನ್ನು ನಿಲ್ಲಿಸುವ ದೃಷ್ಟಿಯಿಂದ ಎಲ್ಲಾ ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ, ಪ್ರಸ್ತುತ ಮುದ್ರಿಸಿ ವಿತರಿಸುತ್ತಿರುವ ಪ್ರಮಾಣ ಪತ್ರಗಳ ಬದಲಿಗೆ ಸಾರ್ವಜನಿಕರಿಗೆ ಎಸ್.ಎಂ.ಎಸ್ ಮೂಲಕ ನೀಡುವ ಗಣಕೀಕೃತ ಸಂಖ್ಯೆಯನ್ನು ಇತರ ಇಲಾಖೆಗಳಿಗೆ ಸಲ್ಲಿಸುವ ಅರ್ಜಿಗಳಲ್ಲಿ ನಮೂದಿಸುವಂತಹ ಕಾಗದ ರಹಿತ ಪ್ರಮಾಣ ಪತ್ರದ ಸೇವೆಯನ್ನು ಜಾರಿಗೊಳಿಸಲಾಗಿರುತ್ತದೆ.

ಈ ಗಣಕೀಕೃತ ಪ್ರಮಾಣ ಪತ್ರದ ಸಂಖ್ಯೆಯನ್ನು ಅರ್ಜಿದಾರರು/ವಿದ್ಯಾರ್ಥಿಗಳು ಶೈಕ್ಷಣಿಕ ಉದ್ದೇಶಕ್ಕಾಗಿ ಶಾಲೆಗಳಿಗೆ ಹಾಗೂ ಇತರ ಸೌಲಭ್ಯಗಳಿಗಾಗಿ ಸಂಬಂಧಿಸಿದ ಇಲಾಖೆಗಳಿಗೆ ಸಲ್ಲಿಸಬೇಕಾಗಿರುವ ಅರ್ಜಿಯಲ್ಲಿ ನಮೂದಿಸಬೇಕಾಗಿರುತ್ತದೆ. ಇದರಿಂದಾಗಿ, ಮುದ್ರಿಸಿದ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕಾಗಿರುವ ಅಗತ್ಯತೆಯಿರುವುದಿಲ್ಲ.

# Flow chart of the Proposed Process

## I. In the Nadakacheri




## II. In the other Government Department.

